# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

**ಪ್ರವೇಶಾತಿ ವಿಭಾಗ**

ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ – I/ 92/2021-22 ದಿನಾಂಕ: 01.04.2021

**ಸುತ್ತೋಲೆ:**

ವಿಷಯ: **ಎರಡನೇ/ಅಂತಿಮ ವರ್ಷಕ್ಕೆ ಬೋಧನಾ ಶುಲ್ಕ ಪಾವತಿಸಲು ಅಂತಿಮ ದಿನಾಂಕವನ್ನು ವಿಸ್ತರಿಸಿರುವ ಕುರಿತು:**

ಉಲ್ಲೇಖ:1. ಸುತ್ತೋಲೆ ಸಂಖ್ಯೆ:ಕರಾಮುವಿ/ಎಡಿಎಂ–I/74/ಯುಜಿ/ಪಿಜಿ/20–21/ದಿ: 15.02.2021

2. ಸುತ್ತೋಲೆ ಸಂಖ್ಯೆ:ಕರಾಮುವಿ/ಎಡಿಎಂ–I/74/ಬಿ.ಇಡಿ.ಬೋಶುಪಾ–2/20–21/ದಿ: 15.02.2021
3. University Circular No: KSOU/ADM-1/74/MBA/ M.Sc /20-21, Dtd: 15.02.2021
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 31.03.2021

*******

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಜನವರಿ ಆವೃತ್ತಿಯಲ್ಲಿ ಯುಜಿ / ಪಿಜಿ ಕೋರ್ಸುಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ 2020-21ರ ಸಾಲಿಗೆ ದ್ವಿತೀಯ ಬಿ.ಎ/ಬಿ.ಕಾಂ/ ಬಿ.ಇಡಿ ಹಾಗೂ ಅಂತಿಮ ಎಂ.ಎ/ಎಂ.ಕಾಂ./ಎಂ.ಎಸ್ಸಿ/ಎಂ.ಬಿ.ಎ ಶಿಕ್ಷಣ ಕ್ರಮಗಳಿಗೆ ಬೋಧನಾ ಶುಲ್ಕ ಪಾವತಿಸಲು ರೂ:400/- ದಂಡ ಶುಲ್ಕದೊಡನೆ ದಿನಾಂಕ:31.03.2021 ಅಂತಿಮ ದಿನಾಂಕವೆಂದು ನಿಗದಿಪಡಿಸಿ ಉಲ್ಲೇಖ(1) ರಿಂದ (3)ರ ರೀತ್ಯ ಸುತ್ತೋಲೆಗಳನ್ನು ಹೊರಡಿಸಲಾಗಿದ್ದಿತು.

ಇತ್ತೀಚೆಗೆ ಕರೋನ ಎರಡನೇ ಅಲೆ ಪ್ರಾರಂಭವಾಗಿ, ಹೆಚ್ಚಿನ ವಿದ್ಯಾರ್ಥಿಗಳು ನಿಗದಿತ ಅವಧಿಯಲ್ಲಿ ಬೋಧನಾ ಶುಲ್ಕ ಪಾವತಿಸಲು ಸಾಧ್ಯವಾಗದಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಮನವಿ ಮೇರೆಗೆ 2020-21ರ ಸಾಲಿಗೆ ದ್ವಿತೀಯ ಬಿ.ಎ/ಬಿ.ಕಾಂ/ ಬಿ.ಇಡಿ ಹಾಗೂ ಅಂತಿಮ ಎಂ.ಎ/ಎಂ.ಕಾಂ./ಎಂ.ಎಸ್ಸಿ/ಎಂ.ಬಿ.ಎ ಶಿಕ್ಷಣ ಕ್ರಮಗಳಿಗೆ ಬೋಧನಾ ಶುಲ್ಕ ಪಾವತಿಸಲು **ಅಂತಿಮ ದಿನಾಂಕವನ್ನು ರೂ:400/- ದಂಡ ಶುಲ್ಕದೊಡನೆ ದಿನಾಂಕ:26.04.2021ರವರೆಗೂ ವಿಸ್ತರಿಸಲಾಗಿದೆ.** ಉಳಿದಂತೆ, ಉಲ್ಲೇಖಿತ ಸುತ್ತೋಲೆಗಳಲ್ಲಿನ ಇತರೆ ಮಾರ್ಗಸೂಚಿಗಳು ಮುಂದುವರೆಯಲಿವೆ.

ಆದೇಶದ ಮೇರೆಗೆ,

ಕುಲಸಚಿವ

ಗೆ:

1. ಕರಾಮುವಿ ಆನ್‌ಲೈನ್ ಪ್ರವೇಶಾತಿ ನಿರ್ವಹಣೆ, ಕಿಯೋನಿಕ್ಸ್ ಪ್ರತಿನಿಧಿಗಳು ಇವರಿಗೆ –
   (i) ಈ ಸುತ್ತೋಲೆಯನ್ನು ಆನ್‌ಲೈನ್ ಪ್ರವೇಶಾತಿ ಪೋರ್ಟಲ್‌ನಲ್ಲಿ ಪ್ರಕಟಿಸಿ ಆನ್‌ಲೈನ ಮೂಲಕ ಪ್ರವೇಶಾತಿಗೆ ಕ್ರಮವಹಿಸಲು ತಿಳಿಸಿದೆ.
   (ii) ವಿದ್ಯಾರ್ಥಿಗಳಿಗೆ SMS ಸಂದೇಶವನ್ನು ಕಳುಹಿಸಲು ತಿಳಿಸಿದೆ.
2. ಡಾ: ಡಿ.ಎಂ.ಮಹೇಶ್, ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಅಂತರ್ಜಾಲ ನಿರ್ವಹಣೆ ಇವರಿಗೆ - ಸದರಿ ಸುತ್ತೋಲೆಗಳನ್ನು ವಿವಿ ನಿಲಯದ ಅಂತರ್ಜಾಲದಲ್ಲಿ ಕೂಡಲೇ ಪ್ರಕಟಿಸಲು ಕ್ರಮವಹಿಸುವಂತೆ ಕೋರಿದೆ.
3. ಸಂಯೋಜನಾಧಿಕಾರಿಗಳು, ಪಜಾ/ಪಪ ಘಟಕ, ಕರಾಮುವಿ, ಮೈಸೂರು.
4. ಎಲ್ಲಾ ಪ್ರಾದೇಶಿಕ ನಿರ್ದೇಶಕರುಗಳು, ಕರಾಮುವಿ ಪ್ರಾದೇಶಿಕ ಕೇಂದ್ರಗಳು ಇವರಿಗೆ - ಸದರಿ ಸುತ್ತೋಲೆಗಳನ್ನು ತಮ್ಮ ಇ-ಮೇಲ್‌ಗೆ ಕಳುಹಿಸಲಾಗಿದ್ದು, ಸದರಿ ಸುತ್ತೋಲೆಗಳ ವಿವರವನ್ನು ತಮ್ಮ ಪ್ರಾದೇಶಿಕ ಕೇಂದ್ರದ ಸರಹದ್ದಿನಲ್ಲಿ ದೈನಂದಿನ ಕನ್ನಡ ಮತ್ತು ಆಂಗ್ಲ ಪತ್ರಿಕೆಗಳಲ್ಲಿ ಸುದ್ದಿ ಮಾಧ್ಯಮದಡಿ **ಉಚಿತವಾಗಿ** ಪ್ರಕಟಣೆಗಳನ್ನು ನೀಡಿ ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸಲಾಗಿದೆ.

ಪ್ರತಿ:

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್ (ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು.
3. ಎಲ್ಲಾ ಉಪಕುಲಸಚಿವರು ಹಾಗೂ ಸಹಾಯಕ ಕುಲಸಚಿವರು ಕರಾಮುವಿ, ಮೈಸೂರು (ಇ ಮೇಲ್ ಮೂಲಕ).
4. **ಮುಖ್ಯಸ್ಥರುಗಳು, ಎಲ್ಲಾ ಶೈಕ್ಷಣಿಕ ಅಧ್ಯಯನ ವಿಭಾಗಗಳು, ಕರಾಮುವಿ ಇವರಿಗೆ – ಮಾಹಿತಿಗಾಗಿ (ಇ ಮೇಲ್ ಮೂಲಕ).**
5. ವಿಶೇಷ ಕರ್ತವ್ಯಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಸಚಿವಾಲಯ, ಕರಾಮುವಿ, ಮೈಸೂರು.
6. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
7. ಆಯಾ ವಿಷಯದ ಕಾರ್ಯನಿರ್ವಾಹಕರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು
8. ಸೂಚನಾಫಲಕಗಳಿಗೆ. 9. ಕಚೇರಿ ಪ್ರತಿ.